**ಅಧಿಕ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ., ಕನಕಪುರ ರವರ ನ್ಯಾಯಾಲಯದಲ್ಲಿ**

# CC No.307/2021

| | |
|---|---|
| ಸಾಕ್ಷಿದಾರರ ಹೆಸರು | ಸುಧಾ ಕೆ ಜೆ |
| ಗಂಡನ ಹೆಸರು | ಶ್ರೀಕಂಠ ಕೆ ಎನ್ |
| ವಯಸ್ಸು | 36 ವರ್ಷ |
| ವೃತ್ತಿ | ಅಬಕಾರಿ ನಿರೀಕ್ಷಕರು ರಾಮನಗರ ಉಪವಿಭಾಗ |
| ವಿಳಾಸ | ಕನಕಪುರ |
| ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕಃ | 06.01.2026 |

**ಮುಖ್ಯ ವಿಚಾರಣೆ ಎ ಪಿ ಪಿ ರವರಿಂದಃ-**

ಆರೋಪಿತರನ್ನು ನೋಡಿರುತ್ತೇನೆ. ಈ ದಿನ ನ್ಯಾಯಾಲಯದಲ್ಲಿ ಹಾಜರಿರುತ್ತಾರೆ.

ನಾನು 2016 ರಿಂದ 2021 ರವರೆಗೂ ಅಬಕಾರಿ ಉಪ ನಿರೀಕ್ಷಕರಾಗಿ ಕನಕಪುರ ವಲಯಲ್ಲಿ ನನ್ನ ಕರ್ತವ್ಯ ನಿರ್ವಹಿಸುತ್ತಿರುತ್ತೇನೆ.

ದಿನಾಂಕ 18.01.2020 ರಲ್ಲಿ ಬೆಳಿಗ್ಗೆ 7.10 ಗಂಟೆಯಲ್ಲಿ ರಾಮನಗರ ಜಿಲ್ಲೆಯ ಕನಕಪುರ ತಾಲ್ಲೂಕು ಸಾತನೂರು ಹೋಬಳಿ ಚಿಕ್ಕಲಾಹಳ್ಳಿ ಗ್ರಾಮದ ಗೋಪಾಲಣ್ಣ ಎಂಬುವವರ ತೆಂಗಿನ ತೋಟದ ಗುಡಿಸಲಲ್ಲಿ ನಾನು ಪಂಚರಾಗಿ ಚಾಸಾ-1, 3 ಮತ್ತು 4 ರವರ ಜೊತೆ ಸ್ಥಳಕ್ಕೆ ಹೋಗಿರುತ್ತೇನೆ. ಸದರಿ ದಿನ ಕನಕಪುರ ವಲಯದಲ್ಲಿ ಸಾತನೂರು ಸರ್ಕಲ್ ಬಳಿ ಅಬಕಾರಿ ಗಸ್ತು ಮಾಡುತ್ತಿದ್ದ ಸಮಯದಲ್ಲಿ ಚಾಸಾ-1 ರವರಿಗೆ ಖಚಿತ ಮಾಹಿತಿ ಒಂದು ಬಂದಿರುತ್ತದೆ. ಸಾತನೂರು ಸರ್ಕಲ್ ಬಳಿ ಸಾರ್ವಜನಿಕರನ್ನು ಪಂಚರಾಗಿ ಬರಲು ಕೇಳಿದಾಗ ಅವರು ಬರಲು ಒಪ್ಪಿ ರುವುದಿಲ್ಲ ಹಾಗೂ ಅವರ ಹೆಸರನ್ನು ಹೇಳಲು ಒಪ್ಪಿ

ರುವುದಿಲ್ಲ. ಇನ್ನು ತಡವಾದ್ದಲ್ಲಿ ಸಾಕ್ಷ್ಯ ನಾಶವಾಗಬಹುದು ಎಂದು ಇಲಾಖೆಯವರಾದ ನಾವುಗಳೇ ಅಂದರೆ ಚಾಸಾ-1, ನಾನು ಮತ್ತು ಚಾಸಾ-3 ರವರು ಪಂಚರಾಗಿ ಸ್ಥಳಕ್ಕೆ ಹೋಗಿರುತ್ತೇವೆ. ಪರೀಕ್ಷಾ ತರ್ಕವಾಗಿ ಚಾಸಾ-1 ರವರು ಸೇಂದಿಯನ್ನು ಖರೀದಿ ಮಾಡುವ ಸಂಬಂಧ ಚಾಸಾ-3 ರವರನ್ನು ಕಳುಹಿಸಿದರು. ನಂತರ ಚಾಸಾ-3 ರವರು ಅಲ್ಲಿ ಬಿಳಿ ಬಣ್ಣದ ಘಾಟು ವಾಸನೆ ಇರುವ ಸೇಂದಿ ತರಹ ಇರುವ ದ್ರಾವಣ ಇರುವ ಬಗ್ಗೆ ನಮಗೆ ಖಚಿತ ಪಡಿಸಿರುತ್ತಾರೆ. ಆದ್ದರಿಂದ ನಾವು ಸ್ಥಳಕ್ಕೆ ಹೋದೆವು. ಸ್ಥಳದಲ್ಲಿ ಒಬ್ಬ ಅಸಾಮಿ ಇದ್ದು ಆತನನ್ನು ಸದರಿ ದ್ರವ್ಯವು ಏನೆಂದು ಕೇಳಿದಾಗ ಅದು ಸೇಂದಿ ಎಂದು ಹೇಳಿರುತ್ತಾನೆ.

ನಂತರ ನ್ಯಾಯಾಲಯದಿಂದ ಶೋಧನೆ ಮಾಡುವ ಅನುಮತಿಯನ್ನು ಪಡೆಯಲು ತಡವಾಗಬಹುದು ಎಂದು ನಮಗೆ ಇರುವ ಪ್ರದತ್ತ ಅಧಿಕಾರವನ್ನು ಉಪಯೋಗಿಸಿಕೊಂಡು ನಾವು ಸದರಿ ಸ್ಥಳವನ್ನು ಶೋಧನೆ ಮಾಡಿರುತ್ತೇವೆ. ಆಗ ಸದರಿ ಸ್ಥಳದಲ್ಲಿ 20 ಲೀಟರ್ ಸಾಮರ್ಥ್ಯದ 5 ಪ್ಲಾಸ್ಟಿಕ್ ಕ್ಯಾನುಗಳಲ್ಲಿ 100 ಲೀಟರ್ ನಷ್ಟು ಬಿಳಿ ದ್ರಾವಣ ಸೇಂದಿ ಸ್ವರೂಪದ ದ್ರಾವಣ ಇರುವುದು ಕಂಡು ಬಂದಿರುತ್ತದೆ. ಸದರಿ ಆಸಾಮಿಯ ಬಳಿ ವಿಚಾರಣೆ ಮಾಡಲಾಗಿ ಆತನ ಬಳಿ ಈ ಸಂಬಂಧ ಯಾವುದೇ ಪರವಾನಿಗೆ ಇಲ್ಲ ಎಂದು ತಿಳಿದು ಬಂದಿರುತ್ತದೆ. ನಂತರ ಆತನು ತನ್ನ ಹೆಸರು ಪೆರುಮಾಳ್ ಎಂದು ತೋಟದಲ್ಲಿ ಕೆಲಸ ಮಾಡುವುದಾಗಿ ಸದರಿ ತೋಟ ಗೋಪಾಲಣ್ಣನವರಿಗೆ ಸೇರಿರುತ್ತದೆಂದು ತಿಳಿಸಿರುತ್ತಾನೆ. ನಂತರ ಎಫ್ ಎಸ್ ಎಲ್ ವರದಿ ಪಡೆಯುವ ಸಂಬಂಧ 1 ಲೀಟರ್ ಸಾಮಾರ್ಧ್ಯದ 2 ಪ್ಲಾಸ್ಟಿಕ್ ಬಾಟಲ್ ಗಳಲ್ಲಿ 2 ಲೀಟರ್ ಸೇಂದಿ ತರಹ ಇರುವ ದ್ರಾವಣವನ್ನು ಸ್ಯಾಂಪಲ್ ಗೆ ತೆಗೆದುಕೊಂಡು ಕ್ಯಾಪ್ ನ್ನು ಬಟ್ಟೆಯಿಂದ ಸುತ್ತಿ 845 ಎಂಬ ಅಬಕಾರಿ ಇಲಾಖೆಯ ಸೀಲನ್ನು ಹಾಕಲಾಗಿರುತ್ತದೆ. ನಂತರ ಉಳಿದ ಮಾಲುಗಳನ್ನು ಜಪ್ತು ಪಡಿಸಿಕೊಳ್ಳಲಾಯಿತು. 1ನೇ ಆರೋಪಿಯನ್ನು ದಸ್ತಗಿರಿ ಮಾಡಿಕೊಂಡು ನಂತರ ಮೊಕದ್ದಮೆಯನ್ನು ನೊಂದಣಿ ಮಾಡಿಕೊಳ್ಳುವುದಾಗಿ ತಿಳಿಸಿರುತ್ತೇವೆ.

ಸದರಿ ಸ್ಥಳದ ಚಕ್ಕುಬಂದಿ ಉತ್ತರಕ್ಕೆ ಖಾಲಿ ನಿವೇಶನ, ದಕ್ಷಿಣಕ್ಕೆ ಸಾತನೂರು ದೊಡ್ಡಾಲಹಳ್ಳಿ ರಸ್ತೆ, ಪೂರ್ವಕ್ಕೆ ಶಿವಣ್ಣನವರ ಮನೆ ಹಾಗೂ ಪಶ್ಚಿಮಕ್ಕೆ ದೊಡ್ಡಅರಸನ ಮನೆ ಇರುತ್ತದೆ. ಸದರಿ ಮಹಜರ್ ನ್ನು 7.10 ರಿಂದ 8.10 ರವರೆಗೂ ಮಾಡಲಾಗಿರುತ್ತದೆ.

ಸಾಕ್ಷಿಗೆ ಸದರಿ ಪ್ರಕರಣದಲ್ಲಿ ಮಹಜರ್ ನ್ನು ತೋರಿಸಲಾಗಿ ಸಾಕ್ಷಿಯು ನೋಡಿ ಗುರುತಿಸಿದ್ದು ಅದನ್ನು ಈಗ ನಿಪಿ-2 ಎಂದು ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ಈಗ ನ್ಯಾಯಾಲಯದ ಮುಂದೆ ಹಾಜರು ಪಡಿಸಿರುವ ಮುದ್ದೆಮಾಲುಗಳನ್ನು ತೋರಿಸಲಾಗಿ ಸಾಕ್ಷಿ ಅವುಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ಮು.ಮ-1 ಮತ್ತು 2 ಎಂದು ಗುರುತಿಸಲಾಗಿರುತ್ತದೆ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದ**

ಚಾಸಾ-1 ರವರು ರಾಜ್ಯ ವಿಚಕ್ಷಣಾ ದಳ ಬೆಂಗಳೂರು ಇಲ್ಲಿ ಕರ್ತವ್ಯ ನಿರ್ವಹಿಸುತ್ತಾರೆ. ಅವರು ಇಡೀ ರಾಜ್ಯದಲ್ಲಿ ಗಸ್ತು ಮಾಡುತ್ತಾರೆ. ಚಾಸಾ-3 ಮತ್ತು 4 ರವರು ಚಾಸಾ-1 ರವರ ಪೇದೆಗಳು. ಚಾಸಾ-5 ಮತ್ತು 6 ರವರು ನಮ್ಮ ಸಿಬ್ಬಂದಿಗಳು. ನಮಗೆ ಮಾಹಿತಿ ಬಂದಾಗ ನಾವು ಸಾತನೂರು ಸರ್ಕಲ್ ಬಳಿ ಇದ್ದೇವು. ಚಾಸಾ-1, ಚಾಸಾ-3 ರಿಂದ 5 ರವರು ನಮ್ಮ ಜೊತೆ ಅದೇ ಸ್ಥಳದಲ್ಲಿದ್ದರು. ಚಾಸಾ-1, 3 ಮತ್ತು 4 ರವರು ಕನಕಪುರದಿಂದ ಬಂದಾಗ 6.30 ಗಂಟೆಯಾಗಿತ್ತು. ನಾವು ಆಗ ಕಚೇರಿಯಲ್ಲಿದ್ದೇನು. ನನಗೆ ಮುಂಚೆಯೇ ಅವರು ಬರುವುದಾಗಿ ಮಾಹಿತಿ ಕೊಟ್ಟಿರುತ್ತಾರೆ. ಅವರುಗಳು ಕಚೇರಿಗೆ ಬರುವುದಾಗಿ ನಮಗೆ ಮಾಹಿತಿ ಕೊಟ್ಟಿರುತ್ತಾರೆ. ನಮಗೆ ಹಿಂದಿನ ದಿನವೇ ಮಾಹಿತಿ ಕೊಟ್ಟಿದ್ದರು. ನೇರವಾಗಿ ಕನಕಪುರ ಹಾಗೂ ಮಳಮಳ್ಳಿ ರಸ್ತೆಯಲ್ಲಿ ಗಸ್ತು ಮಾಡಿರುತ್ತೇವೆ. ಚಾಸಾ-1 ರವರಿಗೆ ಪ್ರಕರಣದ ಬಗ್ಗೆ ಮಾಹಿತಿ ಬಂದಿರುತ್ತದೆ. ಸಾತನೂರಿಗೆ ಹೋದಾಗ ಸುಮಾರು 6.45 ಗಂಟೆಯಾಗಿತ್ತು. ಚಾಸಾ-1 ರವರ ವಾಹನದಲ್ಲಿ ಹೋಗಿರುತ್ತೇವೆ. ಚಿಕ್ಕಾಲಹಳ್ಳಿ ಸ್ಥಳವೂ ನಮಗೆ ನಮ್ಮ ವ್ಯಾಪ್ತಿಗೆ ಬರುವುದರಿಂದ ಗೊತ್ತಿತ್ತು

ಆದರೆ ಘಟನಾ ಸ್ಥಳದ ಬಗ್ಗೆ ಗೊತ್ತಿರುವುದಿಲ್ಲ. ನಾಯಕನಹಳ್ಳಿಯಿಂದ ಚಿಕ್ಕಾಲಹಳ್ಳಿಗೆ ಪರೀಕ್ಷಾ ತರ್ಕವಾಗಿ ನಮ್ಮ ಸಿಬ್ಬಂದಿಯವರನ್ನು ಮೊದಲಿಗೆ ಅಲ್ಲಿಗೆ ಕಳುಹಿಸಿದ್ದೇವು. ಅದು ಕೇವಲ 5 ನಿಮಿಷ ಅಂತರವಿರುವ ಸ್ಥಳ. ಸದರಿಯವರು ಬೈಕಿನಲ್ಲಿ ಹೋಗಿರುತ್ತಾರೆ. ನಾವು ಸದರಿ ಸ್ಥಳದಲ್ಲಿ ಬೈಕಿನ ಮುಖಾಂತರ ಅಲ್ಲಿಗೆ ಕಳುಹಿಸಿದ ವ್ಯಕ್ತಿಯ ಹೆಸರು ಮತ್ತು ಸದರಿ ಬೈಕಿನ ಸಂಖ್ಯೆ ಹೇಳುವಂತಿಲ್ಲ. ಅವರು ಕರೆ ಮಾಡಿ ಹೇಳಿದ 5 ನಿಮಿಷದ ನಂತರ ನಾವು ಸ್ಥಳಕ್ಕೆ ಹೋಗಿರುತ್ತೇವೆ. ನಾವು ಸ್ಥಳಕ್ಕೆ ಹೋಗುವ ಪೂರ್ವದಲ್ಲಿ ಚಾಸಾ-3 ರವರು ಸದರಿ ಘಟನಾ ಸ್ಥಳದಲ್ಲೇ ನಿಂತಿದ್ದರು. ಅದು ಗುಡಿಸಲು ಇರುವ ಜಾಗ. ಅಲ್ಲಿದ್ದ ವ್ಯಕ್ತಿಯು ಅದು ಗೋಪಾಲಣ್ಣನವರಿಗೆ ಸೇರಿರುತ್ತದೆಂದು ನುಡಿಯುತ್ತಾರೆ. ಈ ಸಂಬಂಧ ನಾನು ಯಾವುದೇ ದಾಖಲೆಯನ್ನು ನೋಡಿರುವುದಿಲ್ಲ.

ನಾವು ಸ್ಥಳಕ್ಕೆ ಹೋಗಿ ನೋಡಿದಾಗ ಸದರಿ ಕ್ಯಾನುಗಳು ಗುಡಿಸಲಿನ ಮಧ್ಯಭಾಗದಲ್ಲಿತ್ತು. 20 ಲೀಟರ್ ನ 5 ಕ್ಯಾನುಗಳು ಇದ್ದವು. ಸದರಿ 5 ಕ್ಯಾನುಗಳನ್ನು ನಾವು ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ ಕೇವಲ ಸ್ಯಾಂಪಲ್ ತೆಗೆದುಕೊಂಡು ಬಾಟಲ್ ಗಳನ್ನು ಹಾಜರು ಪಡಿಸಿರುತ್ತೇವೆ. ಸದರಿ ಖಾಲಿ 2 ಪ್ಲಾಸ್ಟಿಕ್ ಬಾಟಲ್ ಗಳನ್ನು ನಾವು ಮುಂಚೆಯೇ ಅಲ್ಲಿಗೆ ತೆಗೆದುಕೊಂಡು ಹೋಗಿದ್ದೇವು. ನಾವು ಸದರಿ ಮು.ಮ-1 ಮತ್ತು 2 ರಲ್ಲಿ ಅಲ್ಲಿದ್ದ ಕ್ಯಾನುಗಳಿಂದಲೇ ತೆಗೆದುಕೊಂಡು ಹಾಕಿರುವ ದ್ರವ್ಯ ಎಂದು ಹೇಳಲು ವರದಿ ಇರುತ್ತದೆ ಹಾಗೂ ಪಂಚರ ಸಮಕ್ಷಮ ಇದನ್ನು ಮಾಡಲಾಗಿರುತ್ತದೆ. ಸದರಿ ಜಮೀನಿನ ಸುತ್ತ 2 ಮನೆಗಳು ಇವೆ. ಅಲ್ಲಿ ಅಕ್ಕಪಕ್ಕ ಜನರು ಓಡಾಡುತ್ತಾ ಇರುತ್ತಾರೆಂದರೆ ಸರಿ. ಸದರಿ ಅಕ್ಕಪಕ್ಕದ ಮನೆಯವರನ್ನು ಅಥವಾ ಜಮೀನಿನವರನ್ನು ನಾವು ಕರೆಸಿ ಸಹಿ ಪಡೆದುಕೊಂಡಿರುವುದಿಲ್ಲ. ಸದರಿ ಗುಡಿಸಲು 20x20 ಅಡಿ ಇರಬಹುದು. ಮಹಜರ್ ನಲ್ಲಿ ಗುಡಿಸಲಿನ ವಿಸ್ತೀರ್ಣವನ್ನು ನಮೂದು ಮಾಡಿರುವುದಿಲ್ಲ. ಗುಡಿಸಲಿನ ಅಕ್ಕಪಕ್ಕ ತೆಂಗಿನ ಮರಗಳು ಇದ್ದವು ಆದರೆ ಎಷ್ಟು ಇದ್ದವು ಎಂದು ಹೇಳಲಾಗುವುದಿಲ್ಲ. 1 ತೆಂಗಿನ ಮರದಿಂದ ಸುಮಾರು 1 ರಿಂದ 1ವರೆ ಲೀಟರ್ ನಷ್ಟು ನೀರಾ ತೆಗೆಯಬಹುದು. ಸದರಿ ಸ್ಥಳದಲ್ಲಿ 3ನೇ ಆರೋಪಿಯ ಯಾವುದೇ ಜಮೀನು ಇರಲಿಲ್ಲ ಅದೇ ರೀತಿ ಅಲ್ಲಿ

ಯಾವುದೇ ತೆಂಗಿನ ಮರಗಳು ಇರಲಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ 1ನೇ ಆರೋಪಿಯು ಸದರಿ ಸ್ಥಳದಲ್ಲಿ ಇರಲಿಲ್ಲ ಹಾಗೂ ಯಾವುದೇ ಸೇಂದಿ ಮಾರಾಟ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ.

ಅದೇ ರೀತಿ 1 ಮತ್ತು 3ನೇ ಆರೋಪಿತರಿಗೂ ಸದರಿ ಪ್ರಕರಣಕ್ಕೂ ಯಾವುದೇ ಸಂಬಂಧ ಇಲ್ಲ ನಾವು ಅವರ ಸಮಕ್ಷಮ ನಾನು ಹೇಳಿದಂತೆ ಯಾವುದೇ ಸೇಂದಿಯನ್ನು ಅಮಾನತು ಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ನಾನು ಹೇಳಿರುವಂತೆ ಸದರಿ ಚಕ್ಕುಬಂದಿಯಲ್ಲಿ ಶಿವಣ್ಣ ಅಥವಾ ದೊಡ್ಡಅರಸಯ್ಯರವರ ಮನೆಗಳು ಇರುವುದಿಲ್ಲ ಎಂದರೆ ಸರಿಯಲ್ಲ. ಸದರಿಯವರು ಸದರಿ ದಿನ ಆ ಸ್ಥಳಕ್ಕೆ ಬಂದಿರುವುದಿಲ್ಲ. 3ನೇ ಆರೋಪಿಗೆ ತನಿಖಾಧಿಕಾರಿಯು ಮಾಹಿತಿ ಕೊಟ್ಟಿರುತ್ತಾರೆ. ಈ ಸಂಬಂಧ ನನಗೆ ಗೊತ್ತಿರುವುದಿಲ್ಲ. ಕೇವಲ ಚಾಸಾ-1 ರವರು ಹೇಳಿದ ಮೇರೆಗೆ ಹಾಗೂ ಅಂಕಿಅಂಶದ ಸಲುವಾಗಿ ನಾನು ಹೇಳಿದಂತೆ ಯಾವುದೇ ಘಟನೆ ಆಗದೇ ಇದ್ದರೂ ಸಹಿತ, ಸುಳ್ಳು ದಾಖಲೆ ಸೃಷ್ಟಿ ಮಾಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಪ್ರಸ್ತುತ ಮುದ್ದೆಮಾಲುಗಳಿಗೂ ಆರೋಪಿತರಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

ನಾವು ಮೊದಲು ಕಳುಹಿಸಿದ ವ್ಯಕ್ತಿ ಏನು ಮಾತನಾಡಿರುತ್ತಾರೆ ಈ ಸಂಬಂಧ ಯಾವುದೇ ವಿಚಾರ ನನಗೆ ಗೊತ್ತಿರುವುದಿಲ್ಲ. ನಾನು ಹೇಳಿದಂತೆ ಯಾವುದೇ ಶೋಧನೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಾವು ನೋಡಿದಾಗ ಅದನ್ನು ನಾವು ಬಿಳಿ ಬಣ್ಣದ ಘಾಟು ಇರುವ ದ್ರವಣ ಎಂದು ಹೇಳಿರುತ್ತೇವೆ. ಸದರಿ ಬಿಳಿ ಬಣ್ಣದ ದ್ರವಕ್ಕೂ ಈಗ ನ್ಯಾಯಾಲಯದ ಮುಂದೆ ಇರುವ ಮುದ್ದೆಮಾಲುಗಳಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಾನು ಹೇಳಿದ ಚಕ್ಕುಬಂದಿಯಲ್ಲಿ ಯಾವುದೇ ಗುಡಿಸಲು ಇರಲಿಲ್ಲ ಹಾಗೂ ಅಲ್ಲಿ ನಾನು ಹೇಳಿದಂತೆ ಯಾವುದೇ ವಸ್ತುಗಳು ಇರಲಿಲ್ಲ ಎಂದರೆ ಸರಿಯಲ್ಲ. ಕೇವಲ ಮೇಲಾಧಿಕಾರಿಗಳ ನಿರ್ದೇಶನ ಮೇರೆಗೆ ನಾನು ಈ ರೀತಿ ಮಹಜರ್ ಮಾಡಿರುವುದಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

CW.2 PW.2

**ಮರುವಿಚಾರಣೆಃ ಇರುವುದಿಲ್ಲ**

**ಓ ಹೇ ಕೇ ಸರಿ ಇದೆ**

**ಅಧಿಕ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ.,**

**ಕನಕಪುರ .**